ಭಾರವಾದವಳು ಏಳುವುದೆಂದರೆ ಉದ್ದು ಹೆಚ್ಚಾದ ದೋಸೆ ಕಾವಲಿಯಿಂದ ಏಳುವುದು ಕಷ್ಟವಾದ ಹಾಗೆ!

ನಮ್ಮಮನೆಯ ಮೆತ್ತಿನಲ್ಲೂ ಮೆತ್ತನೆಯ ಹಾಸಿಗೆಯೊಂದಿದೆಯಪ್ಪಾ, ಅದರ ಆಕರ್ಷಣೆಯಿಂದ ಮಲಗಿದರೂ ನಡುರಾತ್ರಿಯಲ್ಲಿ ಹೊದಿಕೆ ಸುತ್ತಿಕೊಂಡು ನಿಶಾಚರಿಯಂತೆ ದುಡುದುಡನೆ ಕೆಳಗಿಳಿದು ಬರುತ್ತೇನೆ. ಹೀಗೆ ಹಾಸಿಗೆಯೊಂದಿಗೊಂದು ಅನುಬಂಧವೂ ಇರುತ್ತದೆ. ಹಾಗಾಗಿಯೇ ಹೆಚ್ಚಿನವರಿಗೆ ತಮ್ಮದೇ ಹಾಸಿಗೆಯಲ್ಲಿ ಮಲಗಿದರೆ ಮಾತ್ರ ನಿದ್ದೆ ಬರುವುದು ಹೀಗೆಲ್ಲಾ ಇದೆ.

ಈಗೆಲ್ಲಾ ಬಂದು ಹೋಗುವವರಷ್ಟೇ. ಹಾಸಿಗೆ ವಸ್ತ್ರಗಳು ಬೇಕಷ್ಟಿವೆ. ಆದರೆ ಬಂದು ಉಳಿಯುವವರೇ ಇಲ್ಲ, ಎಲ್ಲರ ಅಂಬೋಣವೂ ಇದೇ. ಜಮಾನಾ ಬದಲಾಗಿದೆ. ಈಗ ತಡಿಗಳೇ ಬೇಡ. ನಾಲ್ಕಾರು ದೊಡ್ಡ ದೊಡ್ಡ ಗಾಸಿಗಳಿದ್ದರೆ ಸಾಕು ಎನ್ನುವವರೂ ಇದ್ದಾರೆ. ಆದರೆ ನಮಗಂತೂ ಒಳ್ಳೆಯ ಹಾಸಿಗೆ ತಲೆದಿಂಬು ಹೊದಿಕೆ ಎಲ್ಲಾ ಸರಿಯಾಗಿರಬೇಕು ನೋಡಿ. ಇಲ್ಲದಿದ್ದರೆ ಬೆಳಗಿನವರೆಗೂ ಹಾಸಿಗೆ ಸರಿಪಡಿಸುವುದರಲ್ಲೇ ಕಳೆದುಬಿಡುತ್ತೇವೆ.

ನಾವು ಕೆಲವಾರು ಹೆಂಗಸರು ಪರಿಚಿತರೊಬ್ಬರ ಮನೆಗೆ ಯಾವುದೋ ಸಮಾರಂಭಕ್ಕೆಂದು ಹೋಗಿದ್ದೆವು. ಹೀಗೇ ಅವರ ಮನೆಯಲ್ಲಿ ಸುತ್ತಾಡುವಾಗ ಕೋಣೆಯೊಂದರಲ್ಲಿ ಹೊಚ್ಚ ಹೊಸ ಲೇಪುಗಳನ್ನು ಒಂದರ ಮೇಲೊಂದಿರಿಸಿದ್ದರು. ಅವರ ಮನೆಯಲ್ಲಿ ಚಿಕ್ಕ ಮಕ್ಕಳಿರಲಿಲ್ಲ, ಹಾಗಾಗಿ ಹಾಸಿಗೆಯ ರಾಶಿಯ ಮೇಲೆ ಹಾರಿ ಹತ್ತಿ ಕುಣಿದು ಕುಪ್ಪಳಿಸುವವರು ಇಲ್ಲದ ಕಾರಣ ಅವೆಲ್ಲ ಚಂದವಾಗಿ ಒಂದರ ಮೇಲೊಂದು ಪವಡಿಸಿದ್ದವು. ನಾನು ಅಚ್ಚರಿಯಿಂದ 'ಇದೇನೆ ಇಷ್ಟೊಂದು ಹೊಸ ಹೊಸ ತಡಿಗಳಲ್ಲೆ?!' ಎಂದಾಗ ಮತ್ಯಾರೋ ಹೇಳಿದರು, 'ಇವರು ಅಪರ ಮಾಡಿಸ್ತಾರಲ್ಲೆ ಹಂಗಾಗಿ ಎಲ್ಲಾ ಶಯ್ಯಾದಾನವೂ ಇಲ್ಲೇ ಬಂದಿರಬೇಕು.' ಹಾಸಿಗೆ ಮಾರಾಟ ಮಾಡಬಹುದು ಬಿಡು ಎಂದು ನಾನು ಬೆರಗುವಡೆದು ಸುಮ್ಮನಾದೆ. ಮರಣಾನಂತರದ ಕರ್ಮಾಂಗಗಳ ದಾನಗಳ ಸಾಲಿನಲ್ಲಿ ಶಯ್ಯಾದಾನವೂ ಮುಖ್ಯವಾದದ್ದೇ.

ಹಾಸಿಗೆಯ ಮೇಲೆ ಸದಾ ಮಲಗಿದ್ದರೆ ಅದು ಸೋಮಾರಿಗಳ ಲಕ್ಷಣ. ಎಲ್ಲೆಂದರಲ್ಲಿ ತಂದು ಬಿಚ್ಚಿಡಬಾರದು ಅದು ಅಸಡ್ಡಾಳತನ, ರಾತ್ರಿ ಮಾತ್ರ ಹಾಸಿಗೆ ಉಪಯೋಗಿಸಬೇಕು ಎಂದೆಲ್ಲಾ ಹಿರಿಯರು ಹೇಳುವುದಿತ್ತು. ಆದರೆ ಈಗ ಅದೇನೋ ದಿವಾನ್ ಎಂದು ಬಂದು ಕೂರಲು ಮಲಗಲು ತಿನ್ನಲು ಎಲ್ಲದಕ್ಕೂ ಬಳಕೆ ಮಾಡುತ್ತಾರಪ್ಪಾ.

ಉದ್ದಾನುದ್ದದ ಮೆತ್ತಿನಲ್ಲಿ ನನ್ನದು ಹಾಸಿಗೆ ನಿನ್ನದು ಹೇಸಿಗೆ ಎಂದು ಜಗಳವಾಡುತ್ತಾ ದಿಂಬಿನಲ್ಲಿ ಹೊಡೆದಾಡಿ ಹತ್ತಿ ಕುಣಿದು ಭರ್ಜರಿಯಾಗಿ ಬೆಳಗಿನವರೆಗೆ ಎಚ್ಚರ ದಾತಿಲ್ಲದಂತೆ ನಿದ್ರಿಸುತ್ತಿದ್ದ ಮಕ್ಕಳೆಲ್ಲ ಎಲ್ಲಿ ಹೋದರೋ ಎಂದು ನಮ್ಮ ಹಾಸಿಗೆಗಳು ವ್ಯಥೆ ಪಡಬಹುದಲ್ಲವೇ! ಹೊಸ ಹೊಸಬರು ಬಂದು ತಮ್ಮ ಬೆಲೆ ನೆಲೆ ಕಡಿಮೆಯಾಯ್ತೇನೋ ಎಂಬ ಬೇಸರವೂ ಇದ್ದಿರಬಹುದು.



ಪ್ರತಿಯೊಂದೂ ಹೊಸತನಕ್ಕೆ ಒಡ್ಡಿಕೊಳ್ಳುವ ಬದಲಾಗುವ ಒಂದು ರೀತಿಯ ಅಪ್ ಡೇಟ್ ಕಾಲವಿದು. ಸಂಸಾರ ಹುಟ್ಟುವುದು ಶುರುವಾಗುವುದು ಕೆಲವೊಮ್ಮೆ ಮುಕ್ತಾಯವಾಗುವುದೂ ಸಹಾ ಈ ನಮ್ಮ ಹಾಸಿಗೆಗಳಿಂದಲೇ! ಬದುಕು ಸಹಾ ಹೆಚ್ಚಿನ ಸಲ ಮುಗಿಯುವುದು ಯಾವುದೋ ಒಂದು ಹಾಸಿಗೆಯ ಮೇಲೇ ಅಲ್ಲವೇ!

ಅವರವರ ಅಂತಸ್ತಿಗೆ ಸರಳತೆ ಆಡಂಬರಗಳಿಗೆ ತಕ್ಕಂತೆ ಇರುವ ತಡಿಗಳೇ ಲೇಪುಗಳೇ ಚಿಂತಿಸಬೇಡಿ. ನೀವು ಯಾವಾಗಲೂ ಇರುವವರೇ. ನಿಮ್ಮನ್ನು ಮೀರಿಸುವ ಅಂದ ಚಂದದ ಬೆಡಗು ಬಿನ್ನಾಣದ ಐಶಾರಾಮಿಗಳಾದ ಯಾರೇ ಬರಲಿ ಹೋಗಲಿ ನಿಮ್ಮ ಅಸ್ತಿತ್ವಕ್ಕೆ ದಕ್ಕೆ ಬಾರದು.

ತಡಿ ರಿಪೇರಿ... ಹಾಸ್ಗೆ ರಿಪೇರಿ... ತಡಿ ರಿಪೇರಿ...

ಓ ಮತ್ತೆ ಇವರು ಬಂದೇ ಬಿಟ್ರಲ್ರೀ...

●